ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ,18 ನೇ ಅಡ್ಡರಸ್ತೆ, ಮಲ್ಲೇಶ್ವರಂ,ಬೆಂಗಳೂರು-12

*ಸಂ/ಪಪೂಶಿಇ/ಇ-ಆಡಳಿತ/ಎಸ್.ಎ.ಟಿ.ಎಸ್/2021* *ದಿನಾಂಕ:1೩-02-2021*

**ಸುತ್ತೋಲೆ**

**ವಿಷಯ**: SATS portal ನಲ್ಲಿ ಕಾಲೇಜಿನ ವಿವರಗಳನ್ನು ಭರ್ತಿ ಮಾಡುವ ಕುರಿತು.

2020-21 ನೇ ಸಾಲಿನಿಂದ ಪ್ರಥಮ ಪಿಯುಸಿ ತರಗತಿಗಳಿಗೆ ದಾಖಲಾದ ವಿದ್ಯಾರ್ಥಿಗಳ ಮಾಹಿತಿಯನ್ನು SATS portal ನಲ್ಲಿ ಅಪಲೋಡ್ ಮಾಡುತ್ತಿರುವದು ಸರಿಯಷ್ಟೆ.ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳ ಮಾಹಿತಿಯನ್ನು ನಿಖರವಾಗಿ ನಮೂದು ಮಾಡವುದು.ಈಗಾಗಲೇ ಸದರಿ ತಂತ್ರಾಂಶದಲ್ಲಿ ಅಪ್ ಡೇಟ್ ಮಾಡಲು ಅವಕಾಶ ನೀಡಲಾಗಿದ್ದು,ಮಾಹಿತಿಗಳನ್ನು ನಮೂದಿಸುವಾಗ ತಪ್ಪಾಗಿದ್ದಲ್ಲಿ ಸರಿಪಡಿಸಿಕೊಳ್ಳಬಹುದಾಗಿದೆ. ವಿದ್ಯಾರ್ಥಿಗಳ ಮಾಹಿತಿಯ ದತ್ತಾಂಶ ಸಂರಕ್ಷಣೆಯು ಅತ್ಯಂತ ಸೂಕ್ಷ್ಮ ವಿಷಯವಾಗಿದ್ದು, ಆಯಾ ಕಾಲೇಜಿನ ಪ್ರಾಚಾರ್ಯರನ್ನು ಹೊರತು ಪಡಿಸಿ,ಇಲಾಖೆಯ ಯಾವುದೇ ಹಂತದ ಅಧಿಕಾರಿಗಳು ವಿದ್ಯಾರ್ಥಿಗಳ ವಿವರಗಳನ್ನು ಸಂಪೂರ್ಣವಾಗಿ ನೋಡುವ ವ್ಯವಸ್ಥೆ ಸದರಿ ತಂತ್ರಾಶದಲ್ಲಿ ಲಭ್ಯವಿರುವದಿಲ್ಲ.ಆದುದರಿಂದ ಯಾವುದೇ ಖಾಸಗಿ ವ್ಯಕ್ತಿ ಹಾಗೂ ಸಂಸ್ಥೆಗಳಿಗೆ ಯುಕ್ತವಲ್ಲದ ರೀತಿಯಲ್ಲಿ, ವಿದ್ಯಾರ್ಥಿಗಳ ವಯಕ್ತಿಕ ಮಾಹಿತಿ ವಿವರಗಳನ್ನು ನೀಡುವದು, Information Technology **Act** (2000) ("IT **Act**") ಪ್ರಕಾರ ಗೌಪ್ಯತೆ ನಿಯಮ ಉಲ್ಲಂಘನೆಯಾಗುತ್ತದೆ ಆದುದರಿಂದ ಪ್ರಾಚಾರ್ಯರು ತಮ್ಮ ಲಾಗ್ ಇನ್ ವಿವರಗಳನ್ನು ಅತ್ಯಂತ ರಹಸ್ಯವಾಗಿ ಇಟ್ಟುಕೊಳ್ಳುವುದು ಅವಶ್ಯಕವಾಗಿದೆ.

**A. ದ್ವಿತೀಯ ಪಿಯುಸಿ ದಾಖಲಾತಿ ವಿವರ ನಮೂದಿಸಲು ಪ್ರಾಚಾರ್ಯರು ಅನುಸರಿಸಬೇಕಾದ ಕ್ರಮಗಳು**

1. 2019-20 ರಲ್ಲಿ ಪ್ರಥಮ ಪಿಯುಸಿಗೆ ದಾಖಲಾಗಿ,ಪ್ರಸ್ತುತ ವರ್ಷ 2020-21 ನಲ್ಲಿ ದ್ವಿತೀಯ ಪಿಯುಸಿಗೆ ದಾಖಲಾಗಿರುವ ಹಾಗೂ ದಾಖಲಾತಿ ಆಗದಿರುವ ವಿದ್ಯಾರ್ಥಿಗಳ ಸಂಪೂರ್ಣ ಮಾಹಿತಿಯನ್ನು SATS PORTAL ನಲ್ಲಿ ವರ್ಗಾಯಿಸಲಾಗಿದೆ.
2. ಪ್ರಸ್ತುತ ವರ್ಷ (2020-21) ನಲ್ಲಿ ದ್ವಿತೀಯ ಪಿಯುಸಿ ತರಗತಿಗೆ ದಾಖಲಾದ ವಿದ್ಯಾರ್ಥಿಗಳಿಂದ ಪಡೆದ ಬೋಧನಾ ಶುಲ್ಕ,ಪರೀಕ್ಷಾ ಶುಲ್ಕ (ತಾತ್ವಿಕ ಹಾಗೂ ಪ್ರಾಯೋಗಿಕ(ಅನ್ವಯಿಸಿದ್ದಲ್ಲಿ) )ಗಳನ್ನು ನಮೂದಿಸುವದು.
3. ಹೀಗೆ ನಮೂದಿಸುವಾಗ ಸದರಿ ವಿದ್ಯಾರ್ಥಿಯು ಪ್ರಥಮ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳನ್ನು ನಿಗದಿತ ಕಾಲಂನಲ್ಲಿ ಭರ್ತಿ ಮಾಡುವದು.
4. ಒಂದು ವೇಳೆ ವಿದ್ಯಾರ್ಥಿಯು ದ್ವಿತೀಯ ಪಿಯುಸಿ ತರಗತಿಗೆ ದಾಖಲಾತಿ ಆಗಿರದಿದ್ದ ಪಕ್ಷದಲ್ಲಿ , SATS PORTAL ನಲ್ಲಿ ಸೂಚಿಸಿರುವಂತೆ ನಿರ್ದಿಷ್ಟ ಕಾಲಂ ನಲ್ಲಿ ,ನಿಗದಿತ ಷರಾ ನಮೂದಿಸುವದು.

5. ಒಂದು ವೇಳೆ ವಿದ್ಯಾರ್ಥಿಯು ಪ್ರಥಮ ಪಿಯುಸಿ ಉತ್ತೀರ್ಣನಾಗಿಯೂ ದ್ವಿತೀಯ ಪಿಯುಸಿ ಗೆ ದಾಖಲಾಗದಿದ್ದಲ್ಲಿ ಅಂತಹ ವಿದ್ಯಾರ್ಥಿಯ ಅಂಕಗಳನ್ನು ಭರ್ತಿ ಮಾಡುವ ಕಾಲಂ ನಲ್ಲಿ ,ನಮೂದಿಸಿ, ಮುಂದೆ ಕಾಣಿಸಲಾದ ಕಾಲಂನಲ್ಲಿ ನಿಗದಿತ ಷರಾ ದಾಖಲಿಸುವದು.

ಒಂದು ವೇಳೆ ಈ ಹಿಂದೆ ಚಾಲನೆಯಲ್ಲಿದ್ದ,PU ONLINE PORTAL ನಲ್ಲಿ ವಿದ್ಯಾರ್ಥಿಗಳ ವಿವರ ಇದ್ದು,ಪ್ರಸ್ತುತ SATS PORTAL ನಲ್ಲಿ ಬಿಟ್ಟು ಹೋಗಿದ್ದಲ್ಲಿ, ಅಥವಾ ಸೇರ್ಪಡೆಯಾಗದಿದ್ದಪಕ್ಷದಲ್ಲಿ,ಕಾಲೇಜು ಬದಲಾವಣೆ ಇತ್ಯಾದಿ ನಮೂದುಗಳಲ್ಲಿ ಏನಾದರೂ ವ್ಯತ್ಯಾಸವಾದಲ್ಲಿ ಈ ಕೆಳಗೆ ಕಾಣಿಸಿದ ಸಿಬ್ಬಂದಿಯವರನ್ನು ಕಚೇರಿಯ ಸಮಯದಲ್ಲಿ ಸಂಪರ್ಕಿಸುವುದು

| ಕ್ರ.ಸಂ | ಹೆಸರು | ಮೋಬೈಲ್ ನಂಬರ್ | ಹಂಚಿಕೆ ಮಾಡಲಾದ ವಿಭಾಗ |
|---|---|---|---|
| 1 | ಶ್ರೀಮತಿ ಸುಮಯ್ಯಾ ತಾಜ್ ಶಾಖಾಧಿಕಾರಿಗಳು,ಗಣಕ ಶಾಖೆ | 9731863274 | ಮೈಸೂರು ವಿಭಾಗ |
| 2 | ಶ್ರೀ.ಅನಂತಕುಮಾರ ಭಟ್ ಪ್ರದಸ, ಗಣಕಶಾಖೆ | 9739854864 | ಕಲಬುರ್ಗಿ ವಿಭಾಗ |
| 3 | ಶ್ರೀ ಬಾಲಾಜಿ ಪಿ.ವೈ ದ್ವಿದಸ ಗಣಕಶಾಖೆ | 9886082073 | ಬೆಂಗಳೂರು ವಿಭಾಗ |
| 4 | ಶ್ರೀ.ವಿನಯ.ಟಿ,ಪ್ರೊಗ್ರಾಮರ್ ಗಣಕಶಾಖೆ/ಇ-ಆಡಳಿತ | 8971644416 | ಬೆಳಗಾವಿ ವಿಭಾಗ |

**B. ಪ್ರಥಮ ಪಿಯುಸಿ ದಾಖಲಾತಿ ವಿವರ ನಮೂದಿಸಲು ಪ್ರಾಚಾರ್ಯರು ಅನುಸರಿಸಬೇಕಾದ ಕ್ರಮಗಳು**

ಈಗಾಲೇ ಬಹುತೇಕ ಕಾಲೇಜುಗಳಲ್ಲಿ SATS PORTAL ನಲ್ಲಿ2020-21 ವರ್ಷದ ಪ್ರಥಮ ಪಿಯುಸಿಗೆ ದಾಖಲಾದ ವಿದ್ಯಾರ್ಥಿಗಳ ವಿವರಗಳನ್ನು ನಮೂದಿಸುವ ಕಾರ್ಯವು ಚಾಲನೆಯಲ್ಲಿ ಇದೆ. ಈ ಕಾರ್ಯದಲ್ಲಿ ಏನಾದರೂ ಸಮಸ್ಯೆ ಅಥವಾ ತಾಂತ್ರಿಕ ತೊಂದರೆಯಾದಲ್ಲಿ ಕೆಳಗೆ ಕಾಣಿಸಿದ ಸಿಬ್ಬಂದಿಯವರನ್ನು ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.

**C. ಇತರೆ**

SATS PORTAL ನಲ್ಲಿ ಕಾಲೇಜಿನ ವಿವರ ದಾಖಲಿಸಲು "UPDATE COLLEGE" ಶೀರ್ಷಿಕೆಯಡಿಯಲ್ಲಿ ಅವಕಾಶ ನೀಡಿದ್ದು, ಅದರಲ್ಲಿ College Details,College Type Information ಈ ಎರಡು ವಿವರಗಳನ್ನು ಮಾತ್ರ ಕಡ್ಡಾಯವಾಗಿ ನಮೂದಿಸಿ ಅಪಡೇಟ್ ಮಾಡಲು ತಿಳಿಸಿದೆ . ಕರ್ನಾಟಕ ಭೌಗೋಳಿಕ ಮಾಹಿತಿ ವ್ಯವಸ್ಥೆ(KGIS) ಯ ಕಾರ್ಯಗಳಿಗೆ ಸಹಕಾರಿಯಾಗಲು ತಮ್ಮ ಕಾಲೇಜಿನ ಆವರಣದಲ್ಲಿ ಗೂಗಲ್ ಮ್ಯಾಪ್ ಆಧರಿಸಿ ಅಕ್ಷಾಂಶ ಹಾಗೂ ರೇಖಾಂಶ ಗಳನ್ನು ನಿಗದಿತ ಕಾಲಂ ನಲ್ಲಿ ಭರ್ತಿ ಮಾಡುವದು.

ಈಗಾಗಲೇ PU ONLINE PORTAL ನಲ್ಲಿ ಪ್ರಾಚಾರ್ಯರ,ಉಪನ್ಯಾಸಕರ ಹಾಗೂ ಬೋಧಕೇತರ ಸಿಬ್ಬಂದಿಯವರ ವಿವರ ಪಡೆಯಲಾಗಿದ್ದು.SATS PORTAL ನಲ್ಲಿ

ವರ್ಗಾಯಿಸುವ ಪ್ರಕಿಯೆ ಚಾಲನೆಯಲ್ಲಿದೆ. ಸಂಪೂರ್ಣವಾಗಿ ವರ್ಗಾಯಿಸಿದ ನಂತರ,ತಮ್ಮ ಹಂತದಲ್ಲಿ ಅಪ್ ಡೇಟ್ ಮಾಡಲು ಅವಕಾಶ ನೀಡಲಾಗುವದು.

ಕಾಲೇಜು ಹೊಂದಿರುವ ಎಲ್ಲ ಮೂಲಭೂತ ಸೌಕರ್ಯಗಳ ಮಾಹಿತಿಯನ್ನೂ ಕೂಡ SATS PORTAL ನಲ್ಲಿ ದಾಖಲಿಸುವ ಯೋಜನೆಯ ತಂತ್ರಾಂಶ ಪ್ರಗತಿಯಲ್ಲಿದ್ದು,ಶೀಘ್ರದಲ್ಲಿ ಸಕ್ರಿಯಗೊಳಿಸಲಾಗುವುದು.ಆದುದರಿಂದ ತಮ್ಮ ಕಾಲೇಜಿಗೆ ಸಂಬಂಧಿಸಿದಂತೆ ಮೂಲಭೂತ ಸೌಕರ್ಯಗಳ ಮಾಹಿತಿಗಳನ್ನು ಪೂರ್ವಭಾವಿಯಾಗಿ ಸಿದ್ಧಪಡಿಸಿ ಇಟ್ಟುಕೊಳ್ಳುವಂತೆ ಸೂಚಿಸಿದೆ

| ಕ್ರ.ಸಂ | ಹೆಸರು | ಮೋಬೈಲ್ ನಂಬರ್ | ಹಂಚಿಕೆ ಮಾಡಲಾದ ವಿಭಾಗ |
|---|---|---|---|
| 1 | ಶ್ರೀ ಷಫೀಕ್ ಅಹ್ಮದ , ದ್ವಿದಸ ಇ-ಆಡಳಿತ | 9538019046 | ಬೆಂಗಳೂರು ವಿಭಾಗ |
| 2 | ಶ್ರೀ ಶರತ್‌ಕುಮಾರ, ದ್ವಿದಸ ಇ-ಆಡಳಿತ | 7259403487 | ಕಲಬುರ್ಗಿ ವಿಭಾಗ |
| 3 | ಕು.ಲತಾ ಈ, ಪ್ರದಸ ಇ-ಆಡಳಿತ | 9606232423 | ಬೆಳಗಾವಿ ವಿಭಾಗ |
| 4 | ಶ್ರೀಮತಿ ಉಮ್ಮೇ ಹಾನಿ ತಾಂತ್ರಿಕ ಸಲಹೆಗಾರರು SATS | 9538004883 | ಮೈಸೂರು ವಿಭಾಗ |

ಒಂದು ವೇಳೆ , ಪ್ರಸ್ತುತ ವರ್ಷ ಹೊಸದಾಗಿ ಕಾಲೇಜು ಪ್ರಾರಂಭವಾಗಿದ್ದಲ್ಲಿ, SATS PORTAL ನಲ್ಲಿ ರಜಿಸ್ಟರ್ ಆಗಲು ಕ್ರಮ ಸಂ 1 ರಲ್ಲಿ ಕಾಣಿಸಲಾದ ಸಿಬ್ಬಂದಿಯವರನ್ನು ಸಂಪರ್ಕಿಸಬಹುದಾಗಿದೆ.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

ಗೆ

ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರುಗಳಿಗೆ – ಸಂಬಂಧಿಸಿದ ಉಪನಿರ್ದೇಶಕರುಗಳ ಮೂಲಕ